ಭಯವಾಗ್ತಿದೆ' ಎಂದರು ಕಳವಳದಿಂದ.

'ಅದು ನೀನೇ ಹೇಳಬೇಕು ವೀಣಕ್ಕ. ಏನಾಗಿದೆ ನಿವಿಗೆ? ಯಾಕೆ ಅವಳ ವರ್ತನೆ ಹೀಗೆ, ಏನು ಸಮಸ್ಯೆ ಇದೆ?'

'ನನಗೇನೇ ಗೊತ್ತು? ಅವಳ ಈ ವರ್ತನೆ ಈಗಲೇ ನೋಡ್ತಿರೋದು ನಾನು'.

'ಇಲ್ಲ ಅತ್ತೆ. ನಿಮಗೆ ಸ್ವಲ್ಪವಾದರೂ ಇದರ ಸುಳಿವು ಇರಲೇಬೇಕು. ಏಕಾಏಕಿ ಹೀಗೆ ಆಗಲು ಸಾಧ್ಯವೇ ಇಲ್ಲ. ನೀವು ಏನೋ ಮುಚ್ಚಿಡುತ್ತಿದ್ದೀರಿ ನನ್ನಿಂದ. ಸತ್ಯ ಹೇಳಿ. ನಿಮಗೆ ಬೇಕಾದರೆ ನಾನು ಆಶ್ವಾಸನೆ ಕೊಡುತ್ತೇನೆ. ನಾನು ಯಾವಾಗಲೂ ನಿವಿಯ ಜೊತೆ ಇರುತ್ತೇನೆ. ಎಂಥ ಪರಿಸ್ಥಿತಿಯಲ್ಲೂ ಅವಳ ಕೈ ಬಿಡುವುದಿಲ್ಲ. ಆದರೆ ಅವಳಿಗೆ ಈ ತೊಳಲಾಟದಿಂದ ಮುಕ್ತಿ ಸಿಗಬೇಕು. ಅವಳು ಈ ಕ್ಷೋಭೆಯಿಂದ ಹೊರ ಬರಬೇಕು. ಅವಳಿಗೆ ಬಿಡುಗಡೆ ದೊರಕಬೇಕು. ಅದಕ್ಕೇ ಕೇಳ್ತಾ ಇದ್ದೀನಿ' ಪ್ರದೀಪ ಸ್ವಲ್ಪ ಆಗ್ರಹಿಸುವ ದನಿಯಲ್ಲಿ ನುಡಿದಾಗ ವೀಣಮ್ಮ ಗಂಟಲಲ್ಲಿ ಏನೋ ಸಿಲುಕಿಕೊಂಡಂತೆ ಚಡಪಡಿಸುತ್ತ,

'ಹಾಗೇನಿಲ್ಲಪ್ಪ, ಸ್ವಲ್ಪ ಸಮಸ್ಯೆ ಎಂದು ಅನ್ನಿಸಿದ್ದು ನಿಜ. ಆದರೆ ಈಗಲ್ಲ. ಅವ್ಳು ಶಾಲೆಗೆ ಹೋಗೋವಾಗ ನಾನೂ ಕೆಲಸಕ್ಕೆ ಹೋಗ್ತಿದ್ದೆ. ನಾವು ಗಂಡ ಹೆಂಡತಿ ಬರೋವಾಗ ಕತ್ಲಾಗ್ತಿತ್ತು. ಪಾಪ ನಿವಿ ಒಬ್ಳೇ ಮನೇಲಿರ್ತಿದ್ಲು. ಭಯವಾಗ್ತಿತ್ತು. ಅವ್ಳು ಒಂಟಿಯಾಗಿ ಉಳಿದು ಭಯ ಅವಳ ಹೃದಯದಲ್ಲಿ ಹೆಪ್ಪುಗಟ್ಟಿ ಬಿಟ್ಟಿತ್ತು. ಇದು ನಮ್ಮ ಅರಿವಿಗೆ ಬರಲೇ ಇಲ್ಲ. ಈಗ ಹೇಗೆ ಅವಳು ಬಾಗಿಲು ಮುಚ್ಚಿ ಕೂತಿದ್ದಾಳೋ, ಆಗಲೂ ಹಾಗೇ ಕತ್ತಲೇಲಿ ಕೂರೋಳು. ಇದೆಲ್ಲಾ ನಮಗೆ ಮೊದಲು ಅರಿವಿಗೆ ಬರಲೇ ಇಲ್ಲ. ನಂತರ ಇರುವ ಒಬ್ಬಳೇ ಮಗಳು ಹೀಗೆ ಬಳಲುವುದು ಬೇಡವೆಂದು ನಾನೇ ನೌಕರಿ ಬಿಟ್ಟೆ. ಅವಳ ಜೊತೆ ಹಗಲು ರಾತ್ರಿ ಇರುತ್ತಿದ್ದೆ. ಕ್ರಮೇಣ ಸರಿ ಹೋದಳು. ಆಗೆಲ್ಲಾ ಅವಳಿಗೆ ಓದುವ ಆಸಕ್ತಿಯೂ ಕಡಿಮೆಯಾಗಿ ಒಂದು ವರ್ಷ ಪರೀಕ್ಷೆನೆ ಬರೆಯದೆ ಮತ್ತೆ ಅದೇ ಕ್ಲಾಸಿನಲ್ಲಿ ಕುಳಿತಳು. ಅದು ಕೂಡ ಅವಳ ಕೀಳರಿಮೆಗೆ ಕಾರಣವಾಯಿತು.'

ನಿವಿಗೆ ಈ ಸಮಸ್ಯೆ ಬಾಲ್ಯದಿಂದಲೂ ಇತ್ತೆಂಬುದು ಈಗ ಪ್ರದೀಪನಿಗೆ ದಿಟವಾಯಿತು. ಕೃತ್ತಿಕಾ ಹೇಳಿಕೊಂಡ ನಿವಿ ಜೊತೆಗಿನ ತಮ್ಮ ಅನುಭವಗಳನ್ನೂ ಅದಕ್ಕೆ ತಾಳೆ ಹಾಕಿದಾಗ ಮೂಲ ಅಲ್ಲೇ ಇದೆ ಎಂಬುದೂ ಅವನಿಗೆ ಸ್ಪಷ್ಟವಾಗಿತ್ತು.

'ನೀವು ಯಾವ ಮಾನಸಿಕ ವೈದ್ಯರನ್ನೋ, ಆಪ್ತ ಸಮಾಲೋಚಕರನ್ನೋ ಸಂಪರ್ಕಿಸಲಿಲ್ಲವೇ?'

'ಛೆ ಛೇ. ಇದೆಲ್ಲಾ ಏನು ದೊಡ್ಡ ಸಂಗತಿಯೆಂದು? ಅಷ್ಟಕ್ಕೂ ಮಾನಸಿಕ ವೈದ್ಯರನ್ನು ತೋರಿಸಲು ಅವಳಿಗೇನು ಹುಚ್ಚೇ? ಹೋದರೂ ಜನರಿಗೆ ತಿಳಿದರೆ ಅವರೆಲ್ಲಾ ನಮ್ಮ ಮಗಳ ಬಗ್ಗೆ ಏನೆಂದುಕೊಳ್ಳುವುದಿಲ್ಲ? ಕೆಟ್ಟ ಹೆಸರು ಬರಲ್ವಾ? ಗ್ರಹಗತಿಗಳು ಸರಿ ಇಲ್ಲವಾದರೆ ದೆಸೆಯ ಕಾರಣದಿಂದ ಹೀಗೆಲ್ಲಾ ಆಗುತ್ತೆ. ಜಾತಕ ತೋರಿಸಿ ಪೂಜೆ ಮಾಡಿಸಿದ ನಂತರ ಅವಳಿಗೆ ಸರಿಹೋಯಿತು' ಎಂದು ತಾವು ಕಂಡುಕೊಂಡ ಪರಿಹಾರವನ್ನು ತಿಳಿಸಿದರು ವೀಣಮ್ಮ.

'ಎಲ್ಲಿ ಸರಿ ಹೋಯಿತು ವೀಣಕ್ಕ? ನೋಡು ಈಗಲೂ ಹೇಗೆ ಆಡ್ತಿದ್ದಾಳೆ' ಅವರ ಮನಸ್ಥಿತಿಯ ಬಗ್ಗೆ ವಿಷಾದ ಭಾವದಿಂದ ಪ್ರತಿಕ್ರಿಯಿಸಿದಳು ಕೃತ್ತಿಕಾ. ಪ್ರದೀಪನಿಗೂ ಅವರ ಮಾತುಗಳನ್ನಾಲಿಸಿ ಕೆಡುಕೆನಿಸಿತ್ತು. ನಿವಿಯ ಮನಸಲ್ಲಿ ಬಾಲ್ಯದಲ್ಲಿ ಹುಟ್ಟಿಕೊಂಡ ಅದಾವುದೋ ಭೀತಿಗೆ ಆಗಲೇ ಪರಿಹಾರ ದೊರಕಿದ್ದರೆ ಅವಳು ಮಾನಸಿಕವಾಗಿ ಈಗ ಆರೋಗ್ಯಪೂರ್ಣವಾಗಿರುತ್ತಿದ್ದಳು. ಆಗ ಅವಳ ಹೆತ್ತವರು ಅವಳ ಸಮಸ್ಯೆಯ ಮೂಲವೇನೆಂದು ಅರ್ಥ ಮಾಡಿಕೊಳ್ಳುವ ಗೋಜಿಗೇ ಹೋಗದೆ ತಮ್ಮದೇ ಊಹೆಗಳಿಂದ ಅದನ್ನು ಅಳೆದು ತಮ್ಮದೇ ಆದ ಪರಿಹಾರ ನೀಡಿದರು. ಅದು ಸರಿ ಹೋಗಿದೆ ಎಂದುಕೊಂಡಿದ್ದು ಅವರ ಭ್ರಮೆಯಷ್ಟೇ ಆಗಿತ್ತು. ಅಸಲಿಗೆ ಆ ಸಮಸ್ಯೆ ಅಲ್ಲಿಂದ ಬೆಳೆದು ಹೆಮ್ಮರವಾಗಿ ಇನ್ನೂ ಆಕೆಯೊಳಗೆ ಅಲ್ಲೋಲಕಲ್ಲೋಲ ಸೃಷ್ಟಿಸುತ್ತಲೇ ಇದೆ. ಆದರೆ ಇಲ್ಲಿಯವರೆಗೂ ಅವಳಲ್ಲಿ ಸುಪ್ತವಾಗಿ ಉರಿಯುತ್ತಿದ್ದ ಈ ಕಿಚ್ಚು ಹೀಗೆ ಏಕಾಏಕಿ ಹೊರಗೆ ಸ್ಫೋಟಗೊಂಡಿದ್ದಾದರೂ ಏಕೆ? ಅವಳನ್ನು ಅಷ್ಟೊಂದು ಕದಡುವಂತೆ ಮಾಡಿದ್ದು ಯಾವ ಘಟನೆ? ತಾನು ಕೈ ಹಿಡಿದು ತನ್ನೊಡನೆ ಬಾಳಲು ಬಂದಾಗಲಿಂದ ಆಕೆ ನನ್ನೊಡನೆ ಸಹಜವಾಗಿಯೇ ಜೀವನ ನಡೆಸುತ್ತಾ ಬಂದಿದ್ದಳು. ಅವಳಲ್ಲಿ ಹೀಗೆ ಮಾನಸಿಕವಾದ ಒಂದು ಘರ್ಷಣೆ ಇದೆ ಎಂಬ ಸಣ್ಣ ಕಲ್ಪನೆಯೂ ತನಗೆ ಬಂದಿರಲಿಲ್ಲ. ಅವಳ ಸಹಜ ಗುಣ ಅಥವಾ ಸಂಪ್ರದಾಯಸ್ಥ ಮನೆತನದ ಮಡಿವಂತಿಕೆಯ ಕವಚದಲ್ಲೇ ಬೆಳೆದ ಹುಡುಗಿಯ ಸ್ತ್ರೀ ಸಹಜ ಸಂಕೋಚ ಮತ್ತು ಲಜ್ಜೆ ಎಂದುಕೊಂಡೇ ಇದ್ದೆ. ಆದರೆ ಇದರ ಆಳ ಬೇರೆಯೇ ಇದೆ!'

ಪ್ರದೀಪ ಒಂದು ಕ್ಷಣ ದಿಕ್ಕು ತೋಚದವನಂತೆ ಅಧೀರನಾಗಿ ನಿಂತಿದ್ದ. ಅವನೊಳಗೊಂದು ವಿಪ್ಲವ ಆಗಲೇ ಶುರುವಾಗಿತ್ತು. ಅವನ ಒಳಗಿನ ಶಕ್ತಿಯೆಲ್ಲವೂ ಸೋರಿ ಹೋದಂತವನಾಗಿ ಸ್ವಲ್ಪ ನಿರಾಸೆಯ ಭಾವದಲ್ಲೇ ಕಾಲೆಳೆದುಕೊಂಡು ಬಂದು ಅತಿಥಿಗಳ ಮುಂದೆ ಕುಳಿತ. ಅರವಿಂದ ಮಗಳ ಬಳಿ, 'ಎಲ್ಲಿಗೆ ಹೋಗಿದ್ದೆ ಕೃತ್ತಿಕಾ? ನಿವಿ ಎಲ್ಲಿ?'

'ಅವಳು ಬರುವ ಸ್ಥಿತಿಯಲ್ಲಿಲ್ಲ. ನಾವು ಹೊರಡೋಣ' ಎಂದು ತಂದೆಗೆ ಉತ್ತರಿಸಿ, ಪ್ರದೀಪನತ್ತ ತಿರುಗಿ, 'ಬಾವ, ನಾವು ಇನ್ನೊಮ್ಮೆ ಬರ್ತೇವೆ. ನಿಧಿಗೆ ಈ ಗಿಫ್ಟ್ ತಂದಿದ್ದೆ. ನನ್ನ ಪರವಾಗಿ ನೀವೇ ಕೊಡಿ. ಸರೀನಾ?' ಎಂದು ಎಲ್ಲರನ್ನೂ ಎಬ್ಬಿಸಿ ಹೊರಡಿಸಿದಳು.

ಮಕ್ಕಳು ನಿಧಿಯನ್ನು ಕಾಣದೇ ನಿರಾಸೆಪಟ್ಟರೂ ತಾಯಿಯ ಗದರಿಕೆಗೆ ಅರೆ ಮನಸ್ಸಿನಿಂದಲೇ ತಾವು ಬಂದ ವಾಹನ ಏರಿದರು. ಪ್ರದೀಪ ಪೆಚ್ಚಾಗಿದ್ದ. ಅವನು ಮತ್ತೆ ಟೆರೇಸ್‌ಗೆ ಬಂದು ನಿವಿಗೆ ಕೇಳುವಂತೆ, 'ನಿವಿ, ಅವರೆಲ್ಲಾ ಹೊರಟು ಹೋದರು. ನೀನು ಹೊರಗೆ ಬರಬಹುದು' ಎಂದು ಬಾಗಿಲು ಜೋರಾಗಿ ತಟ್ಟಿದ. ಚಿಲಕ ತೆಗೆದ ಸದ್ದಿನ ಹಿಂದೆಯೇ ಬಾಗಿಲು ತೆರೆದುಕೊಂಡಿತು. ನಿವೇದಿತಾ ನಿಧಿಯನ್ನು ಗಟ್ಟಿಯಾಗಿ ಅವುಚಿಕೊಂಡು ಹಿಡಿದಿದ್ದಳು. ಅವಳ ಕಂಗಳು ತೇವಗೊಂಡಿದ್ದವು. ಮುಖ ಬಿಳಚಿಕೊಂಡಿತ್ತು. ಪತ್ನಿಯ ಸ್ಥಿತಿ ಕಂಡು ಪ್ರದೀಪನಿಗೆ ಸಂಕಟವಾಯಿತು.

'ಏನಾಯಿತು ನಿವಿ. ಯಾಕೆ ಹೀಗೆ ಆಡ್ತಿದ್ಯಾ. ಏನಾಗಿದೆ ನಿನಗೆ? ನಿನ್ನ ಮನಸ್ಸಲ್ಲೇನಿದೆ ನನಗೆ ಹೇಳು. ನಾನು ನಿನ್ನ ಜೊತೆ ಇದ್ದೀನಿ. ಪ್ಲೀಸ್. ನೀನು ಹೀಗೆ ಆಡ್ತಿದ್ರೆ ನನಗೆ ನೋವಾಗುತ್ತೆ' ಎಂದ ಆರ್ದ್ರವಾಗಿ.

'ಏನಿಲ್ಲ ಪ್ರದೀಪ್. ನನಗೆ ನೀವು ಎಲ್ಲಿ ಮತ್ತೆ ಅವ್ರ ಜೊತೆ ನನ್ನ ಕಳಿಸಿ ಬಿಡ್ತೀರೋ ಎಂಬ ಭಯ ಅಷ್ಟೇ. ನಾನು ನಿಮ್ಮನ್ನು ಬಿಟ್ಟು ಎಲ್ಲೂ ಹೋಗಲ್ಲ. ನನಗೆ ಇಲ್ಲೇ ನಿಮ್ಮ ಜೊತೆ ಇರಬೇಕು. ನಿಮ್ಮ ಪ್ರೀತಿ ಬೇಕು. ನಾನು ಇಲ್ಲೇ ಸೆಕ್ಯೂರ್ ಫೀಲ್ ಮಾಡ್ತೀನಿ ಪ್ಲೀಸ್. ನನ್ನ ಅರ್ಥ ಮಾಡಿಕೊಳ್ಳಿ' ಎಂದು ಗಳಗಳನೆ ಅತ್ತಳು.

ಪ್ರದೀಪ ತನ್ನ ಮೇಲಿನ ಅವಳ ಪ್ರೀತಿಯ ತೀವ್ರತೆ ಕಂಡು ಕರಗಿಹೋದ. ಅವನ ಹೃದಯ ದ್ರವಿಸಿ, ಅವಳನ್ನು ತನ್ನೆದೆಗೊರಗಿಸಿ ಹಣೆಗೆ ಹೂ ಮುತ್ತೊಂದನ್ನಿತ್ತು ಗಟ್ಟಿಯಾಗಿ ತಬ್ಬಿಕೊಂಡ.

'ನಿನ್ನನ್ನು ಎಲ್ಲೂ ಹೋಗಲು ಬಿಡುವುದಿಲ್ಲ. ನೀನು ಇಲ್ಲೇ ಇರುತ್ತೀಯ, ನನ್ನ ಜೊತೆ' ಎಂದು ದೃಢವಾದ ಸ್ವರದಲ್ಲಿ ನುಡಿದು ಅವಳಲ್ಲಿ ಭದ್ರತೆಯ ಭಾವನೆ ಮೂಡಿಸಿದ. ಊಟ ಮಾಡಿ ನಿವಿ ಮತ್ತು ನಿಧಿ ನಿದ್ರಿಸಿದರೂ ಪ್ರದೀಪನ ಕಣ್ಣಿಗೆ ನಿದ್ದೆ ಸುಳಿಯಲಿಲ್ಲ. ಅವನ ಮನದಲ್ಲಿ ಕೃತ್ತಿಕಾ ಮತ್ತು ವೀಣಮ್ಮ ಆಡಿದ ಮಾತುಗಳೇ ಸುತ್ತು ಹಾಕತೊಡಗಿದ್ದವು. ಈ ವಿಚಾರಗಳು ಡಾ. ರೂಪಾ ಅವರಿಗೆ ತಿಳಿದರೆ ಈ ಕೇಸ್‌ಗೆ ಸಹಾಯ ಆಗಬಹುದೆಂದು ಅವನಿಗೆ ಅನ್ನಿಸಿತ್ತು.

'ನೀವು ನನ್ನ ಪತ್ನಿಯನ್ನು ಭೇಟಿಮಾಡುವ ಮುಂಚೆ ನಿಮ್ಮ ಬಳಿ ಅಗತ್ಯವಾಗಿ ಮಾತನಾಡುವುದಿದೆ. ನಿಮಗೆ ಆಕೆಯ ಬಳಿ ಮಾತನಾಡುವ ಮುನ್ನ ಆಕೆಯನ್ನು ಅರ್ಥಮಾಡಿಕೊಳ್ಳಲು ಅವು ಒಂದಷ್ಟು ನೆರವಾಗಬಹುದು' ಎಂದು ಸಂದೇಶ ಹಾಕಿದ.

ನಿವಿಯ ಕಡೆಗೆ ಹೊರಳಿ ನೋಡಿದ. ಕಣ್ಮುಚ್ಚಿ ಮಲಗಿದ್ದರೂ ಅವಳ ಮುಖ, ಕರಿಮೋಡ ಮುಸುಕಿದ ಬಾನಿನಂತೆ, ಕಳೆಗುಂದಿದೆ. ಹೃದಯ ದೊಳಗೆ ಹೆಪ್ಪುಗಟ್ಟಿರುವ ಯಾವುದೋ ಕ್ಷೋಭೆ, ಅವಳ ಮನಸ್ಸನ್ನು ಕದಡಿ ನಿದ್ದೆಯ ವಶದಲ್ಲಿರು ವಾಗಲೂ ವ್ಯಕ್ತವಾಗುತ್ತಿದೆ. ಯಾರೊಡನೆಯೂ ಹೇಳಿಕೊಳ್ಳಲಾಗದೆ, ಒಳಗೇ ನುಂಗಲಾಗದೆ ಸಂಕಟ ಅನುಭವಿಸುತ್ತಿದ್ದಾಳೆ. ನಿವಿ ಅದರಿಂದ ಆಚೆ ಬರಬೇಕು. ತಾನು ಅವಳಿಗೆ ಪ್ರತೀ ಹಂತದಲ್ಲಿ ಒತ್ತಾಸೆಯಾಗಿ ನಿಲ್ಲಬೇಕು. ತನಗೆ ಅವಳು ಪರಿಪೂರ್ಣವಾಗಿ ದಕ್ಕಬೇಕು. ಯಾವ ಪೂರ್ವಗ್ರಹ, ಒತ್ತಾಯ, ಭಯ, ಅಳುಕು, ಆತಂಕ, ರಾಜಿ ಮಾಡಿಕೊಳ್ಳುವ ಅರೆ ಮನಸ್ಸಿನ ಸಮರ್ಪಣೆ ತನಗೆ ಬೇಡ. ಅವಳು ಮನಸ್ಪೂರ್ವಕವಾಗಿ ತುಂಬು ಮನಸ್ಸಿನಿಂದ, ಪ್ರೀತಿಯಿಂದ ಈ ಮನೆಯಲ್ಲಿ ನಲಿವಿನಿಂದ ಇರಬೇಕು. ಅದೇ ತನ್ನ ಆಸೆ. ಡಾ. ರೂಪಾ ಈ ನಿಟ್ಟಿನಲ್ಲಿ ತನಗೆ ಸಹಕಾರ ನೀಡಿದರೆ ತನ್ನ ಬದುಕೂ ಸುಂದರವಾಗಬಹುದು ಎಂದು ಆಶಿಸಿದ. ಎಷ್ಟೋ ಹೊತ್ತಿನ ನಂತರ ಅವನಿಗೆ ನಿದ್ದೆ ಹತ್ತಿತ್ತು. (ಸಶೇಷ)